ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೪

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೇ ಅಧಿವೇಶನ

## ಸೋಮವಾರ, ದಿನಾಂಕ: ೧೦ನೇ ಮಾರ್ಚ್, ೨೦೨೫

---

### ಸಮೂಹ – II

೧. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

೨. ಇಂಧನ ಸಚಿವರು

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

೪. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

೫. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು

೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

೭. ಉನ್ನತ ಶಿಕ್ಷಣ ಸಚಿವರು

---

### ಕರ್ನಾಟಕ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೬ (೪೨೧) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಮತ್ತು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ಇವೆ ; ಸರ್ಕಾರಿ ಕಾಲೇಜುಗಳಲ್ಲಿ ಉನ್ನತ ಶಿಕ್ಷಣ ಇಲಾಖೆ ಎಷ್ಟು ಹಣವನ್ನು ಹೂಡಿಕೆ ಮಾಡಿದೆ ; (ಕಾಲೇಜುವಾರು ವಿವರ ನೀಡುವುದು)

(ಆ) ಯಾವುದಾದರೂ ಸರ್ಕಾರಿ ಕಾಲೇಜಿನಲ್ಲಿ ವಿ.ಟಿ.ಯು ನಿಂದ ಮತ್ತೆ ಕಟ್ಟಡವನ್ನು ಕಟ್ಟುವಂತಹ ಯೋಜನೆ ಇದೆಯೇ ; ಇದ್ದರೆ ಯಾವ ಯೋಜನೆ; ಅದರಿಂದ ಆಗುವ ಅನುಕೂಲಗಳೇನು ;

(ಇ) ಕಟ್ಟಡ ಈಗಾಗಲೇ ಕಟ್ಟಿದ್ದ ಸರ್ಕಾರಿ ಕಾಲೇಜುಗಳಲ್ಲಿ ಮತ್ತೆ ಯಾವುದಾದರೂ ಕಟ್ಟಡಗಳಿವೆಯೇ ; ಮತ್ತು ಆ ಕಾಲೇಜುಗಳಿಗಿರುವಂತಹ ಇಂಟೇಕ್ ಸಾಮರ್ಥ್ಯ (ವಿದ್ಯಾರ್ಥಿಗಳ ಸಂಖ್ಯೆ) ಎಷ್ಟು ; ಈ ಕಾಲೇಜುಗಳಲ್ಲಿ ಇರುವ ಸಾತ್ನಕೋತ್ತರ ಕೋರ್ಸುಗಳು ಯಾವುವು ; ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಈ) ಸರ್ಕಾರ ವಾರ್ಷಿಕವಾಗಿ ಪ್ರತಿ ಕಾಲೇಜುಗಳಿಗೆ ವೇತನ, ಉಪಕರಣಗಳು, ನಿರ್ವಹಣೆ ಇತ್ಯಾದಿಗಳಿಗೆ ನೀಡಲಾಗುವ ಅನುದಾನವೆಷ್ಟು ;

(ಉ) ಇಂತಹ ಸರ್ಕಾರಿ ಕಾಲೇಜುಗಳಿಗೆ ವಿಟಿಯು ನಿಂದ ಎಷ್ಟು ಹಣವನ್ನು ನೀಡಲಾಗುತ್ತಿದೆ ; (ಕಾಲೇಜುವಾರು ವಿವರ ನೀಡುವುದು)

(ಊ) ಸರ್ಕಾರ ಮತ್ತು ವಿಟಿಯು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುದಾನ ನೀಡುತ್ತಿದೆಯೇ ; ನೀಡಿದ್ದಲ್ಲಿ, ಯಾವ ಯಾವ ಕಾಲೇಜುಗಳಿಗೆ ಎಷ್ಟು ಹಣ ನೀಡಿದೆ ? (ವಿವರ ನೀಡುವುದು)

## ಶಿಕ್ಷಕರ ಕೊರತೆ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೪೭ (೩೨೮) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೨೨–೨೩ ಹಾಗೂ ೨೦೨೩–೨೪ನೇ ಸಾಲಿನಲ್ಲಿ ಸಾರ್ವತ್ರಿಕವಾಗಿ ಶಿಕ್ಷಕರು ವರ್ಗಾವಣೆಯಾದ ಪ್ರಯುಕ್ತ ಕಲ್ಯಾಣ–ಕರ್ನಾಟಕ ಪ್ರದೇಶದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಖಾಯಂ ಶಿಕ್ಷಕರ ಕೊರತೆಯಿಂದ ಅತಿಥಿ ಶಿಕ್ಷಕರಿಂದ ಶಾಲೆಗಳಲ್ಲಿ ಪ್ರವಚನ ತರಗತಿಗಳು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೇ, ಖಾಯಂ ಶಿಕ್ಷಕರ ನೇಮಕಾತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಪ್ರೌಢ ಶಾಲೆಗಳಲ್ಲಿ TALP ಅಡಿಯಲ್ಲಿ ೨೦೧೦ರಿಂದ ಕಂಪ್ಯೂಟರ್ ಆಧಾರಿತ ತರಗತಿಗಳನ್ನು ನಡೆಸಲಾಗುತ್ತಿದ್ದು ಇದುವರೆಗೂ ಕಂಪ್ಯೂಟರ್ ಶಿಕ್ಷಕರನ್ನು ನೇಮಕ ಮಾಡಿಕೊಂಡಿಲ್ಲದಿರುವುದರಿಂದ ವಿದ್ಯಾರ್ಥಿಗಳು ಕಂಪ್ಯೂಟರ್ ಶಿಕ್ಷಣದಿಂದ ವಂಚಿತರಾಗುತ್ತಿರುವುದರಿಂದ ಕಂಪ್ಯೂಟರ್ ಶಿಕ್ಷಕರನ್ನು ನೇಮಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ೨೦೦೬ರಿಂದ ಇಲ್ಲಿಯವರೆಗೆ ಪ್ರೌಢಶಾಲಾ ಸಹ ಶಿಕ್ಷಕರಿಗೆ ಉಪನ್ಯಾಸಕರಾಗಿ ಬಡ್ತಿ ನೀಡಿಲ್ಲದಿರುವುದರಿಂದ ಪ್ರೌಢಶಾಲಾ ಸಹ ಶಿಕ್ಷಕರಿಗೆ ಯಾವಾಗ ಬಡ್ತಿ ನೀಡಲಾಗುವುದು ?

## ರಾಜ್ಯದಲ್ಲಿ ಉತ್ಪಾದನೆ ಹಾಗೂ ಬಳಕೆಯಾಗುವ ವಿದ್ಯುತ್ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೮ (೩೭೨) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಎಷ್ಟು ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ಇದೆ ;

(ಆ) ಇದರಲ್ಲಿ ಗೃಹಬಳಕೆ, ಗೃಹ ಜ್ಯೋತಿ ಯೋಜನೆಗೆ, ವಾಣಿಜ್ಯ ಸಂಪರ್ಕಗಳಿಗೆ ಹಾಗೂ ಕೈಗಾರಿಕಾ ಸಂಪರ್ಕಗಳಿಗೆ ಎಷ್ಟೆಷ್ಟು ಮೆಗಾವ್ಯಾಟ್ ಪೂರೈಕೆ ಮಾಡಲಾಗುತ್ತಿದೆ ; ಒಂದು ವರ್ಷಕ್ಕೆ ಸದರಿ ಸಂಪರ್ಕಗಳಿಗೆ ತಗಲುವ ವಿದ್ಯುತ್ತಿನ ಮೊತ್ತವೆಷ್ಟು ;

(ಇ) ರಾಜ್ಯದಲ್ಲಿ ಯಾವ ಯಾವ ಮೂಲದಿಂದ ಎಷ್ಟೆಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ ; (ವಿವರಗಳನ್ನು ಒದಗಿಸುವುದು)

(ಈ) ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆಯೇ ; ಇದ್ದಲ್ಲಿ ಎಷ್ಟು ಮೆಗಾವ್ಯಾಟ್ ಕೊರತೆ ಇದೆ ಹಾಗೂ ಕೊರತೆ ನೀಗಿಸಲು ಯಾವ ಯಾವ ಮೂಲಗಳಿಂದ ಹಾಗೂ ರಾಜ್ಯಗಳಿಂದ ಖರೀದಿಸಲಾಗುತ್ತಿದೆ ; ಖರೀದಿಗಾಗಿ ಒಂದು ಯೂನಿಟ್ ಒಂದು ಮೆಗಾವ್ಯಾಟ್‌ಗೆ ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ ;

(ಉ) ಪ್ರಸಕ್ತ ಸಾಲಿನಲ್ಲಿ ಎಷ್ಟು ಮೊತ್ತದ ಹಾಗೂ ಎಷ್ಟು ಮೆಗಾವ್ಯಾಟ್ ವಿದ್ಯುತ್ ಖರೀದಿಸಲಾಗಿದೆ ;

(ಊ) ಪ್ರಸ್ತುತ ರಾಜ್ಯದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಎಷ್ಟು ಗಂಟೆಗಳ ಕಾಲ ವಿದ್ಯುತ್ ಪೂರೈಸಲಾಗುತ್ತಿದೆ; ಬೇಸಿಗೆ ಪ್ರಾರಂಭವಾಗುತ್ತಿರುವುದರಿಂದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಲು ಸರ್ಕಾರ ತೆಗೆದುಕೊಂಡಿರುವ ಮುನ್ನೆಚ್ಚರಿಕೆ ಕ್ರಮಗಳೇನು ? (ವಿವರ ಒದಗಿಸುವುದು)

## ರಾಜ್ಯದಲ್ಲಿರುವ ಮರದ ಮಿಲ್‌ಗಳ ಮಾಹಿತಿ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೪೯ (೪೪೭) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಮರದ ಮಿಲ್ಲುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಕಳೆದ ೦೨ ವರ್ಷಗಳಲ್ಲಿ ಮರದ ಮಿಲ್ಲುಗಳು ಅರಣ್ಯ ಇಲಾಖೆಯಿಂದ ಎಷ್ಟು ಮರಗಳನ್ನು ಖರೀದಿ ಮಾಡಿವೆ ; (ಜಿಲ್ಲಾವಾರು ಮತ್ತು ಮರದ ಮಿಲ್ ಹೆಸರುಗಳೊಂದಿಗೆ ಮಾಹಿತಿಯನ್ನು ಒದಗಿಸುವುದು)

(ಇ) ಅರಣ್ಯ ಇಲಾಖೆಯಿಂದ ಮರವನ್ನು ಖರೀದಿ ಮಾಡದೇ ಇದ್ದಲ್ಲಿ, ಯಾವ ರೀತಿಯಾಗಿ ಮರಗಳನ್ನು ಖರೀದಿಸುತ್ತಿವೆ ; (ವಿವರ ಒದಗಿಸುವುದು)

(ಈ) ಕಳೆದ ೦೨ ವರ್ಷಗಳಲ್ಲಿ ಅರಣ್ಯ ಇಲಾಖೆಯು ಎಷ್ಟು ಮರಗಳನ್ನು ಕತ್ತರಿಸಲು ಅನುಮತಿ ನೀಡಲಾಗಿದೆ ; (ಮರಗಳ ವಿಧದೊಂದಿಗೆ (ಹೆಸರುಗಳೊಂದಿಗೆ) ಮಾಹಿತಿ ಒದಗಿಸುವುದು)

## ಸರ್ಕಾರಿ ಆಸ್ಪತ್ರೆಗಳಲ್ಲಿ ಜೀವ ರಕ್ಷಕ ಔಷಧಿಗಳ ಕೊರತೆ ಇರುವ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೫೦ (೩೫೧+೩೩೫) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸರ್ಕಾರಿ ಔಷಧ ಉಗ್ರಾಣದಲ್ಲಿ ಸಾಮಾನ್ಯ ಮತ್ತು ಜೀವ ರಕ್ಷಕ ಔಷಧಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲು ಕೊರತೆ ಇರುವ ಔಷಧಿಗಳು ಯಾವುವು ;

(ಆ) ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಬೇಕಾದ ಜೀವ ರಕ್ಷಕ ಔಷಧಿಗಳ ಕೊರತೆ ಉಂಟಾಗಲು ಕಾರಣಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಅಗತ್ಯ ಇರುವ ಸಾಮಾನ್ಯ ಮತ್ತು ಜೀವ ರಕ್ಷಕ ಔಷಧಿಗಳನ್ನು ಖರೀದಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಜೀವ ರಕ್ಷಕ ಔಷಧಗಳ ಕೊರತೆಯಿಂದಾಗಿ ರೋಗಿಗಳಿಗೆ ಉಂಟಾಗುತ್ತಿರುವ ತೊಂದರೆಗಳನ್ನು ನಿವಾರಿಸಲು ತೆಗೆದುಕೊಂಡಿರುವ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಈ) ತೀವ್ರ ಸೋಂಕಿಗೆ ಒಳಗಾಗುವ ರೋಗಿಗಳಿಗೆ ಅವಶ್ಯಕ ಔಷಧಿಗಳು ಮತ್ತು ಸೂಕ್ತ ತಪಾಸಣೆ ಬೇಕಾದ ಯಂತ್ರೋಪಕರಣಗಳ ಕೊರತೆಯಿಂದ ಬಡ ಜನರು ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳಿಗೆ ಹೋಗುವಂತೆ ಮಾಡಿರುವುದಕ್ಕೆ ಯಾರು ಜವಾಬ್ದಾರರು ; (ವಿವರಿಸುವುದು)

(ಉ) ಸರ್ಕಾರಿ ಆಸ್ಪತ್ರೆಗಳಿದ್ದರೂ ಬಡ ಜನರು ಅನಾವಶ್ಯಕವಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಆರೋಗ್ಯ ವೆಚ್ಚ ಭರಿಸುತ್ತಿರುವುದನ್ನು ತಡೆಯಲು ಸರ್ಕಾರದಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಊ) ಬಡ ರೋಗಿಗಳನ್ನು ನಿರ್ಲಕ್ಷ್ಯದಿಂದ ನೋಡುವುದು ಮತ್ತು ಹಲವಾರು ಹಗರಣಗಳಿಗೆ ಕಾರಣವಾಗಿರುವುದಕ್ಕೆ ಸರ್ಕಾರಿ ಆಸ್ಪತ್ರೆಗಳ ವೈದ್ಯರು/ ಸಿಬ್ಬಂದಿಗಳ ವಿರುದ್ಧ ಯಾವ ಕಠಿಣ ಕ್ರಮಕೈಗೊಳ್ಳಲಾಗಿದೆ ;

(ಋ) ಬಡವರಿಗೆ ಆರೋಗ್ಯ ಗ್ಯಾರಂಟಿ ಸೌಲಭ್ಯ ನೀಡಲು ಸರ್ಕಾರ ಕ್ರಮಕೈಗೊಳ್ಳಲಾಗುವುದೇ ?

## ಬಿಸಿಯೂಟದ ಯೋಜನೆ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೫೧ (೩೭೩) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ಯೋಜನೆಯ ಉದ್ದೇಶವೇನು ; ಇದನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಯೋಜನೆಯಡಿಯಲ್ಲಿ ಪೌಷ್ಠಿಕ ಆಹಾರ, ಮೊಟ್ಟೆ ಮತ್ತು ಇನ್ನಿತರ ಉತ್ಪನ್ನಗಳನ್ನು ಯಾವ ರೀತಿ ಖರೀದಿಸಲಾಗುವುದು ; ಪ್ರತಿ ಉತ್ಪನ್ನಗಳಿಗೆ ಸರ್ಕಾರದಿಂದ ನಿಗದಿಪಡಿಸಿರುವ ಮೊತ್ತವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ತಯಾರಕರು ನಿರ್ವಾಹಕರು ಎಷ್ಟು ; ಸದರಿಯವರಿಗೆ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ನೀಡುವ ವೇತನ ಹಾಗೂ ಇನ್ನಿತರ ಸೌಲಭ್ಯಗಳ ಸಂಪೂರ್ಣ ಮಾಹಿತಿ ನೀಡುವುದು ;

(ಈ) ಸದರಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಬೇಸಿಗೆ ರಜಾ, ದಸರ ರಜಾ ಹಾಗೂ ಬರಗಾಲದ ರಜೆಗಳಲ್ಲಿ ವೇತನ ಹಾಗೂ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ಶಾಲೆಗಳಲ್ಲಿ ಗ್ರಂಥಾಲಯದ ಸೌಲಭ್ಯ ಕಲ್ಪಿಸುವ ಕುರಿತು

**ಶ್ರೀ ಎಸ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೫೨ (೩೫೦) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ರಾಜ್ಯದ ಎಷ್ಟು ಶಾಲೆಗಳಿಗೆ ಗ್ರಂಥಾಲಯದ ವ್ಯವಸ್ಥೆ ಕಲ್ಪಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಇಲಾಖಾ ಮೂಲಕ ಗ್ರಂಥಾಲಯದ ವ್ಯವಸ್ಥೆ ಕಲ್ಪಿಸಿದ್ದಲ್ಲಿ ಮಕ್ಕಳಿಗೆ ಸಣ್ಣ ಪ್ರಾಯದಲ್ಲೇ ಓದುವ ಅಭ್ಯಾಸ ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಮಕ್ಕಳ ಸ್ವ–ಅಧ್ಯಯನದಲ್ಲಿ ಗ್ರಂಥಾಲಯದ ಪಾತ್ರ ಮಹತ್ವದಾಗಿರುವ ಬಗ್ಗೆ ಸರ್ಕಾರದ ನಿಲುವೇನು ;

(ಈ) ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಹುಚ್ಚಂಗಿಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಇಲಾಖೆಯ ವತಿಯಿಂದ ಗ್ರಂಥಾಲಯ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜ್ಯದ ಅತಿಥಿ ಶಿಕ್ಷಕರು ಮತ್ತು ಅತಿಥಿ ಉಪನ್ಯಾಸಕರ ಸಮಸ್ಯೆ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) –**

೫೩ (೩೬೨) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಅತಿಥಿ ಶಿಕ್ಷಕರಾಗಿ ಮತ್ತು ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಅತಿಥಿ ಶಿಕ್ಷಕರಿಗೆ ಮತ್ತು ಅತಿಥಿ ಉಪನ್ಯಾಸಕರಿಗೆ ಸರ್ಕಾರ ನೀಡುತ್ತಿರುವ ವೇತನ ಎಷ್ಟು ;

(ಇ) ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರಿಗೆ ಹಾಗೂ ಅತಿಥಿ ಉಪನ್ಯಾಸಕರಿಗೆ ಸರ್ಕಾರ ಪ್ರತಿ ತಿಂಗಳು ಸರಿಯಾಗಿ ವೇತನವನ್ನು ನೀಡದೆ ಇರಲು ಕಾರಣಗಳೇನು ; ಹಾಗೂ ಈ ನೌಕರರಿಗೆ ಇನ್ನೂ ನೀಡಬೇಕಾಗಿರುವ ಬಾಕಿ ವೇತನ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಜಿಲ್ಲಾ ಆಸ್ಪತ್ರೆಗಳನ್ನು ವೈದ್ಯಕೀಯ ಕಾಲೇಜುಗಳಿಗೆ ಸಂಯೋಜಿಸಿರುವ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೫೪ (೩೯೬) ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಿವೆ ; ಸದರಿ ಆಸ್ಪತ್ರೆಗಳನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸಂಯೋಜನೆಗೊಳಿಸಿರುವುದು ನಿಜವೇ ;

(ಆ) ಈ ರೀತಿ ಸಂಯೋಜನೆಗೊಳಿಸಿರುವುದರಿಂದ ಸದರಿ ಜಿಲ್ಲಾ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ಕಿರಿಯ ವಿದ್ಯಾರ್ಥಿಗಳಿಂದ ಚಿಕಿತ್ಸೆ ನೀಡುತ್ತಿದ್ದು, ಇದರಿಂದ ರೋಗಿಗಳಿಗೆ ಸರಿಯಾದ ಕ್ರಮದಲ್ಲಿ ವೈದ್ಯಕೀಯ ಚಿಕಿತ್ಸೆ ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹೌದಾದಲ್ಲಿ, ಸದರಿ ಸರ್ಕಾರಿ ಜಿಲ್ಲಾ ಆಸ್ಪತ್ರೆಗಳನ್ನು ಸಂಯೋಜಿಸುವ ಬದಲು ಆಯಾ ಕಾಲೇಜುಗಳೇ ಆಸ್ಪತ್ರೆಗಳನ್ನು ಪ್ರಾರಂಭಿಸುವಂತೆ ನಿರ್ದೇಶನ ನೀಡಲು ಸರ್ಕಾರವು ಕ್ರಮ ವಹಿಸುವುದೇ ?

## ತುಮಕೂರು ಜಿಲ್ಲೆಯ ಅರಣ್ಯ ಭೂಮಿಯ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

** (೪೧೧) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಇರುವ ಒಟ್ಟು ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು ; ಇದರಲ್ಲಿ ಸಾಮಾಜಿಕ ಅರಣ್ಯ, ಮೀಸಲು ಅರಣ್ಯ, ಡೀಮ್ಡ್ ಅರಣ್ಯದ ತಾಲ್ಲೂಕುವಾರು, ಅರಣ್ಯ ವಿಧದ ಪ್ರಕಾರ ವಿಸ್ತೀರ್ಣ ವಿವರ ನೀಡುವುದು ;

(ಆ) ಈ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶಗಳನ್ನು ಭೂ ಮಾಪನ ಮಾಡಲಾಗಿದೆಯೇ ; ಮಾಡಲಾಗಿದ್ದಲ್ಲಿ, ಯಾವ ವರ್ಷ ಮಾಡಲಾಗಿದೆ ; ಮಾಡದೆ ಇದ್ದಲ್ಲಿ ಕಾರಣಗಳೇನು ; ಯಾವ ಕಾಲಮಿತಿಯಲ್ಲಿ ಭೂಮಾಪನ ಮಾಡಲಾಗುವುದು ;

(ಇ) ಜಿಲ್ಲೆಯಲ್ಲಿ ಒತ್ತುವರಿಯಾದ ಅರಣ್ಯ ಪ್ರದೇಶ ಎಷ್ಟು ; ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ತಾಲ್ಲೂಕುವಾರು, ಗ್ರಾಮವಾರು ಒತ್ತುವರಿದಾರರ ವಿವರ ನೀಡುವುದು)

(ಈ) ಜಿಲ್ಲೆಯ ಮೂರು ಪ್ರಕಾರದ ಅರಣ್ಯಗಳಲ್ಲಿ ಅರಣ್ಯೀಕರಣ ಮಾಡಲಾಗಿದೆಯೇ ; ಮಾಡಲಾಗಿದ್ದರೆ ಕಳೆದ ಹತ್ತು ವರ್ಷಗಳಲ್ಲಿ ಅರಣ್ಯೀಕರಣಕ್ಕೆ ಮಾಡಲಾದ ವೆಚ್ಚವೆಷ್ಟು ; ಯಾವ ಪ್ರಭೇದದ ಗಿಡಗಳನ್ನು ನೆಡಲಾಗಿದೆ ; (ವರ್ಷವಾರು, ಅರಣ್ಯವಾರು ವಿವರ ನೀಡುವುದು)

(ಉ) ಶಿರಾ ತಾಲ್ಲೂಕಿನ ಮುದಿಗರೆ ಕಾವಲ್‌ನಲ್ಲಿ ಇರುವ ಅರಣ್ಯವನ್ನು ಮೀಸಲು ಅರಣ್ಯ ಎಂದು ಯಾವಾಗ ಅಧಿಸೂಚನೆ ಹೊರಡಿಸಲಾಯಿತು ; ಸದರಿ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ಮತ್ತು ಸದರಿ ಅರಣ್ಯದಲ್ಲಿ ಯಾವ ಜಾತಿಯ ಕಾಡುಮರಗಳಿವೆ ;

(ಊ) ಶಿರಾ ತಾಲ್ಲೂಕು ಬುಕಾಪಟ್ಟಣ ವನ್ಯಜೀವಿಧಾಮದಲ್ಲಿ ಅಳಿವಿನಂಚಿನಲ್ಲಿರುವ ಚಿಂಕಾರ (ಹುಲ್ಲೇಕರ) ಪ್ರಾಣಿಗಳ ರಕ್ಷಣೆಗೆ ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮಗಳೇನು ;

(ಋ) ಬೇಸಿಗೆಯಲ್ಲಿ ಕಾಡಿಗೆ ಬೆಂಕಿ ಹಚ್ಚುವ ಮೂಲಕ ಗಿಡ–ಮರ, ಗಿಡಮೂಲಿಕೆ, ಔಷಧ ಗುಣ ಹೊಂದಿರುವ ಬಳ್ಳಿಗಳು ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಹೊಸ ಬಿಪಿಎಲ್ ಕಾರ್ಡ್ ವಿತರಿಸದ ಕಾರಣ ಅರ್ಹ ಫಲಾನುಭವಿಗಳಿಗೆ ತೊಂದರೆ ಆಗಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೫೬. (೩೮೦) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸದಾಗಿ ಬಿ.ಪಿ.ಎಲ್. ಪಡಿತರ ಚೀಟಿ ಪಡೆಯಲು ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಕಳೆದ ಎರಡು ವರ್ಷದಿಂದ ಎಷ್ಟು ಹೊಸ ಬಿ.ಪಿ.ಎಲ್. ಕಾರ್ಡ್ ವಿತರಣೆ ಮಾಡಲಾಗಿದೆ ; ಎಷ್ಟು ಅರ್ಜಿಗಳು ವಿಲೇವಾರಿ ಮಾಡಲು ಬಾಕಿ ಇವೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಇ) ಹೊಸ ಬಿ.ಪಿ.ಎಲ್. ಕಾರ್ಡ್ ವಿತರಿಸದೆ ಇರುವುದರಿಂದ ಅರ್ಜಿ ಸಲ್ಲಿಸಿರುವ ಹಲವಾರು ಅರ್ಹ ಫಲಾನುಭವಿಗಳಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದರೆ, ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ಯಾವಾಗ ಬಿ.ಪಿ.ಎಲ್. ಕಾರ್ಡ್ ವಿತರಣೆ ಮಾಡಲಾಗುವುದು ?

## ಪ್ರೌಢಶಾಲಾ ಶಿಕ್ಷಕರನ್ನು ಪ್ರೌಢ ಶಾಲೆಯಿಂದ ಪದವಿಪೂರ್ವ ಕಾಲೇಜಿಗೆ ಬಡ್ತಿ ನೀಡಲು ಆಗುತ್ತಿರುವ ವಿಳಂಬದ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೫೭ (೪೮೬) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೧೩ ವರ್ಷಗಳಿಂದ ಪ್ರೌಢಶಾಲಾ ಶಿಕ್ಷಕರಿಗೆ ಪದವಿ ಪೂರ್ವ ಕಾಲೇಜಿಗೆ ಉಪನ್ಯಾಸಕರಾಗಿ ಬಡ್ತಿ ನೀಡದಿರಲು ಕಾರಣವೇನು ; ಈ ವಿಳಂಬದಿಂದಾಗಿ ಸಾಕಷ್ಟು ಶಿಕ್ಷಕರು ಸುದೀರ್ಘ ಸೇವೆ ಮಾಡಿ ಬಡ್ತಿ ಇಲ್ಲದೆ ನಿವೃತ್ತಿ ಹೊಂದುತ್ತಿದ್ದು, ಅನ್ಯಾಯಕ್ಕೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸರ್ಕಾರವು ೨೦೨೫ ಫೆಬ್ರವರಿ ತಿಂಗಳೊಳಗಾಗಿಯೇ ಬಡ್ತಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ಎಂದು ಸದನದಲ್ಲಿ ಭರವಸೆ ನೀಡಿದ್ದರೂ, ಇಲ್ಲಿಯವರೆಗೂ ಜೇಷ್ಠತಾ ಪಟ್ಟಿಯನ್ನೇ ತಯಾರಿಸಿಲ್ಲದಿರುವುದರಿಂದ ಅಧಿಕಾರಿಗಳ ಮೇಲೆಯೇ ಅನುಮಾನ ಮೂಡುವಂತೆ ಮಾಡುತ್ತಿದ್ದು, ಯಾವ ಕಾಲಮಿತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ ಬಡ್ತಿಯನ್ನು ನೀಡಲಾಗುವುದು ?

## ಮಕ್ಕಳ ಕ್ಯಾನ್ಸರ್ ಚಿಕಿತ್ಸೆ ಸೌಲಭ್ಯಗಳ ಬಗ್ಗೆ

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೫೮ (೪೦೧) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಕ್ಕಳಲ್ಲಿ ಕ್ಯಾನ್ಸರ್ ಕುರಿತಂತೆ ಪ್ರತಿ ವರ್ಷ ಎಷ್ಟು ಪ್ರಕರಣಗಳು ನೋಂದಣಿಯಾಗುತ್ತಿವೆ ; ಯಾವ ಯಾವ ರೀತಿಯ ಕ್ಯಾನ್ಸರ್ ಖಾಯಿಲೆಗಳು ಮಕ್ಕಳನ್ನು ಬಾಧಿಸುತ್ತಿದೆ ;

(ಆ) ಈ ರೋಗಕ್ಕೆ ಯಾವ ರೀತಿಯ ಚಿಕಿತ್ಸೆ ಸೌಲಭ್ಯಗಳನ್ನು ನೀಡಲಾಗುತ್ತಿದೆ ; ಆಧುನಿಕ ಶಸ್ತ್ರಚಿಕಿತ್ಸಾ ಸೌಲಭ್ಯವನ್ನು ಒದಗಿಸಲಾಗಿದೆಯೇ ;

(ಇ) ಅಸ್ಥಿಮಜ್ಜೆ ಕಸಿ ಆಗಿದ್ದ ಮಕ್ಕಳಿಗೆ ಬಿ.ಎಂ.ಟಿ. ಮಾಡಲಾಗುತ್ತಿದೆಯೇ ; ಹಾಗಿದ್ದಲ್ಲಿ, ತಿಂಗಳಲ್ಲಿ ಎಷ್ಟು ಮಕ್ಕಳಿಗೆ ಬಿ.ಎಂ.ಟಿ. ಮಾಡಲಾಗುತ್ತಿದೆ ;

(ಈ) ಸರ್ಕಾರವು ಸಾರ್ವಜನಿಕರಲ್ಲಿ, ಮಕ್ಕಳಲ್ಲಿ ಕಾಣಿಸಿಕೊಳ್ಳುವ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಗುತ್ತಿದೆಯೇ ?

## ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರುಗಳ ನೇಮಕ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೫೯ (೪೫೮) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರುಗಳ ಹುದ್ದೆಗಳು ಖಾಲಿ ಇರುವುದರಿಂದ ದೀರ್ಘಕಾಲಿಕ ರೋಗಿಗಳಿಗೆ ಪರಿಣಾಮಕಾರಿ ಚಿಕಿತ್ಸೆ ಲಭಿಸದೇ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು ; (ವಿವರ ನೀಡುವುದು)

(ಆ) ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರುಗಳು ಇಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೋಟ್ಯಾಂತರ ರೂಪಾಯಿ ಅನುದಾನಗಳು ಸಮರ್ಪಕವಾಗಿ ವಿನಿಯೋಗವಾಗುತ್ತಿಲ್ಲ ಎಂಬುದು ನಿಜವೇ ; ನಿಜವಾಗಿದ್ದಲ್ಲಿ, ವಿನಿಯೋಗಿಸಲು ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಆಯುಷ್ ಇಲಾಖೆಯ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳಿಗೆ ಖಾಯಂ ತಜ್ಞ ವೈದ್ಯರುಗಳನ್ನು ನೇಮಕಗೊಳಿಸಲು ಬಜೆಟ್‌ನಲ್ಲಿ ಮೀಸಲಿಡಲಾದ ಅನುದಾನವೆಷ್ಟು ? (ವಿವರ ನೀಡುವುದು)

## ರಾಜ್ಯದಲ್ಲಿ ಸ್ಥಾಪಿಸಿರುವ ವಿಶ್ವವಿದ್ಯಾಲಯಗಳ ಬಗ್ಗೆ

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೦ (೪೬೪+೪೭೩+೪೮೯+೪೭೬+೪೫೩) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರವು ರಾಜ್ಯದಲ್ಲಿ ಸ್ಥಾಪಿಸಿರುವ ವಿಶ್ವವಿದ್ಯಾಲಯಗಳು ಯಾವುವು ; ಹಾಗೂ ಯಾವ ಮಾನದಂಡದ ಅಡಿಯಲ್ಲಿ ಸ್ಥಾಪಿಸಲಾಗಿದೆ ; ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಇರುವ ನಿಯಮಗಳೇನು ; (ವಿವರ ನೀಡುವುದು)

(ಆ) ರಾಜ್ಯದ ಗ್ರಾಮೀಣ ಭಾಗದಲ್ಲಿರುವ ಒಟ್ಟು ವಿಶ್ವವಿದ್ಯಾಲಯಗಳು ಎಷ್ಟು ಹಾಗೂ ಇದರಲ್ಲಿ ಎಷ್ಟು ವಿದ್ಯಾರ್ಥಿಗಳು, ಬೋಧಕ–ಬೋಧಕೇತರ ಹಾಗೂ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ; (ಗ್ರಾಮೀಣವಾರು ವಿವರ ನೀಡುವುದು)

(ಇ) ಪ್ರಸ್ತುತ ಸರ್ಕಾರವು ಈ ವಿಶ್ವವಿದ್ಯಾಲಯಗಳಿಗೆ ವಾರ್ಷಿಕವಾಗಿ ಯಾವ ಯೋಜನೆಗಳಿಗೆ ಅನುದಾನ ನೀಡುತ್ತಿದೆ ಮತ್ತು ಅದನ್ನು ಯಾವ ಉದ್ದೇಶಗಳಿಗೆ ಬಳಸಲಾಗುತ್ತಿದೆ ;

(ಈ) ಹಿಂದಿನ ಸರ್ಕಾರದಲ್ಲಿ ಸ್ಥಾಪಿಸಲಾದ ಒಟ್ಟು ೯ ವಿಶ್ವವಿದ್ಯಾಲಯಗಳನ್ನು ಬಂದ್ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ; ಇದರಲ್ಲಿ ಕೊಪ್ಪಳ ವಿಶ್ವವಿದ್ಯಾಲಯವು ಸೇರಿದೆಯೇ ; (ವಿವರ ನೀಡುವುದು)

(ಉ) ರಾಜ್ಯದ ಇತಿಹಾಸದಲ್ಲಿ ಒಮ್ಮೆ ವಿಶ್ವವಿದ್ಯಾಲಯ ಪ್ರಾರಂಭಿಸಿ, ಕಾರ್ಯನಿರ್ವಹಿಸುತ್ತಿರುವ ಒಂದು ವಿಶ್ವವಿದ್ಯಾಲಯವನ್ನು ಶಾಶ್ವತವಾಗಿ ಬಂದ್ ಮಾಡಿರುವ ಉದಾಹರಣೆ ಇದೆಯೇ ; ವಿಶ್ವವಿದ್ಯಾಲಯ ಶಾಶ್ವತವಾಗಿ ಬಂದ್ ಮಾಡುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ ; ಇದಕ್ಕೆ ಹೊಣೆ ಯಾರು ; (ವಿವರ ನೀಡುವುದು)

(ಊ) ಸಚಿವ ಸಂಪುಟ ಉಪ ಸಮಿತಿಯ ಶಿಫಾರಸ್ಸಿನ ಅನ್ವಯ ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ ; ಹಾಗೂ ಈ ವಿಶ್ವವಿದ್ಯಾಲಯಗಳನ್ನು ಮುಚ್ಚದೆ ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರವೇನಾದರೂ ಕ್ರಮ ಕೈಗೊಳ್ಳುವುದೇ ;

(ಋ) ಹೊಸದಾಗಿ ಪ್ರಾರಂಭವಾಗಿರುವ ವಿಶ್ವವಿದ್ಯಾಲಯಗಳ ಬಗ್ಗೆ ಅಧ್ಯಯನ ಮಾಡಲು ರಚಿಸಿದ ಸಂಪುಟ ಉಪ ಸಮಿತಿ ನಿರ್ಣಯ ಕೈಗೊಳ್ಳುವಾಗ ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನು ಪಡೆಯಲಾಗಿದೆಯೇ ; (ಈ ಕುರಿತು ವಿವರವಾದ ಮಾಹಿತಿ ನೀಡುವುದು)

(ಎ) ಕೊಪ್ಪಳ ವಿಶ್ವವಿದ್ಯಾಲಯವನ್ನು ಯಾವಾಗ ಪ್ರಾರಂಭಿಸಲಾಗಿದೆ ; ಇದರ ಕಾರ್ಯರೂಪವೇನು ; ಸದರಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಕಾಲೇಜುಗಳೆಷ್ಟು ; ಸದರಿ ಕಾಲೇಜುಗಳ ಮೂಲಕ ಪ್ರವೇಶ ಪಡೆದಿರುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳೆಷ್ಟು ? (ಕೋರ್ಸುವಾರು, ಕಾಲೇಜುವಾರು ವಿವರ ನೀಡುವುದು)

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಪೂ – ಪ್ರತಿಗಳು

**List of Questions for Oral Answers**

**Total No. of Questions - 15**

# LIST - 4

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Monday, the 10th March, 2025

**GROUP - I**

1. Minister for Food and Civil Supplies and Consumer Affairs
2. Minister for Energy
3. Minister for Health and Family Welfare
4. Minister for Forest, Ecology and Environment
5. Minister for Medical Education and Skill Development
6. Minister for Primary and Secondary Education
7. Minister for Higher Education

**ENGINEERING COLLEGES IN THE KARANTAKA STATE**

**Sri Manjunatha Bhandari (Local Authorities Constituency)-**

46 (421) Will the Minister for Higher Education be pleased to state:-

a) the number of Government and private Engineering Colleges in the State; the amount that has been invested by the Department of Higher Education in the Government colleges; (collegewise details be furnished)

b) whether there is a plan to construct the building by the Visvesvaraya Technological University (V.T.U) again in any Government college; if so, the particular of plan thereof; the benefits which will be caused thereof;

c) whether there are any buildings in the Government colleges where the building that has been constructed already; and the intake capacity (number of students)

of such colleges; the particulars of post graduation courses in these colleges; the number of students thereof; (details be furnished)

d) the grant that has been provided by the Government for salary, equipments, maintenance, etc for each college annually;

e) the details of the amount that is being provided by the Visvesvaraya Teachnological University (V.T.U) for such Government colleges; (collegewise details be furnished)

f) whether the grant is being provided by the Government and Visvesvaraya Technological University (V.T.U) for private engineering colleges; if so, the particulars of colleges for which the amount that has been provided? (details be furnished)

## REGARDING SHORTAGE OF TEACHERS

**Sri Basanagouda Badarli (Elected by Legislative Assembly)-**

47 (328) Will the Minister for Primary and Secondary Education be pleased to state:-

a) whether it has come to the notice of the Government that the teaching classes are being conducted by the guest teachers due to the shortage of permanent teachers in primary and secondary schools of Kalyana-Karnataka region as a result of the general transfer of teachers that has been carried out during the year 2022-23 and 2023-24;

b) if so, the step taken by the Government to recruit the permanent teachers;

c) the computer based classes are being conducted from 2010 under TALP in secondary schools, due to non-recruitment of computer teachers till date; the students are being deprived from the computer education, whether the proposal is before the Government to recruit the computer teachers ;

d) since the promotion has not been given for secondary school assistant teachers into the lectures from 2006 till date, the date on which the same would be given?

## POWER GENERATION AND CONSUMPTION IN THE STATE

**Sri Dinesh Gooligowda (Local Authorities Constituency) -**

48 (372) Will the Minister for Energy be pleased to state:-

a) the details of Megawatt of power demand in the State at present;

b) out of which, the quantum of Megawatt of Power that is being supplied to domestic use, Gruha Jyothi scheme, commercial and industrial connections; the details of amount to be incurred to the said connections for the year;

c) the quantum of Megawatt of power that is being generated in the State from the various sources; (details be furnished)

d) whether there is a shortage of power in the State; if so, the quantum of shortage of megawatt of power and the particulars of sources and States from which the power is being purchased to overcome the shortage; the amount that has been prescribed per unit and per megawatt for purchasing;

e) the amount and the megawatt of power that has been purchased during the current year;

f) the number of hours the power is being supplied to agricultural pumpsets of farmers in the State at present; the precautionary measures taken by the Government to supply the adequate power for agricultural pumpsets of farmers due to the summer season commencing ? (details be furnished)

## INFORMATION OF SAW MILLS IN THE STATE

**Smt. Bharathi Shetty (Nominated) -**

49 (447) Will the Minister for Forest, Ecology and Environment be pleased to state:-

a) the total number of saw mills in the State; (districtwise information be furnished)

b) the number of trees that have been purchased by the saw mills from the Forest Department during the last 2 years; (districtwise information alongwith the names of saw mill be furnished)

c) if the trees have not been purchased from the Forest Department, the manner in which the trees are being purchased; (details be furnished)

d) the number of trees for which the Forest Department has accorded the permission to cut down during the last 2 years? (information alongwith types of tree (alongwith names) be furnished)

## SHORTAGE OF LIFE SAVING DRUGS IN THE GOVERNMENT HOSPITALS

**Sri. S. Ravi (Local Authorities Constituency) -**

**Dr. Talwar Sabanna (Nominated) -**

50 (351+335 ) Will the Minister for Health and Family Welfare be pleased to state:-

a) whether it has come to the notice of the Government that there is a shortage of generic and life saving drugs in the Government Drug Warehouse of the State; if so, the particulars of drugs that are in shortage for supplying to the hospitals;

b) the reasons for the shortage of life saving drugs to be supplied for the Government hospitals; (complete details be furnished)

c) the measures taken by the Government to purchase the required generic and life saving drugs and the

measures taken to resolve the problems that are being caused for the patients due to the shortage of life saving drugs in the Government hospitals; (complete details be furnished)

d) the one who is responsible for creation of the situation to the poor people who are going to the private hospitals inevitably due to the shortage of necessary drugs and the equipments required for the proper investigation of patients with severe infection; (the details be furnished)

e) the steps that has been taken by the Government to prevent poor people those who are bearing the medical expenses in private hospital unnecessarily inspite of having Government hospitals;

f) the stringent action that has been taken against the doctors/ staff of Government hospitals for neglecting poor patients and caused several scams;

g) whether the steps would be taken by the Government to provide the health guarantee facility for poor people?

## MID-DAY MEAL SCHEME

**Sri M.L. Anil Kumar (Local Authorities Constituency) -**

51 (373 ) Will the Minister for Primary and Secondary Education be pleased to state:-

a) the intention of mid-day meal scheme in the Government schools; the year in which the same has been started; (complete information be furnished)

b) the manner in which the nutritious food, egg and other products would be purchased under this scheme; the amount that has been fixed by the Government for each product; (complete information be furnished)

c) the number of cooks and helpers who are working under this scheme; the complete information of honorarium and other facilities that are being provided for the said staff since inception till date be furnished;

d) whether the summer vacation, dasara vacation and drought vacation honorarium and other facilities are being provided for the staff who are working under the said scheme; if not, the timelimit within which the step would be taken by the Government to provide the same? (complete information be furnished)

**PROVIDING LIBRARY FACILITY IN SCHOOLS**

**Sri N.Ravikumar (Elected by Legislative Assembly)** -

52 (350) Will the Minister for Primary and Secondary Education be pleased to state:-

a) the number of schools of the State for which the library facility has been provided by the Department of Primary and Secondary Education; (distrctwise details be furnished)

b) the steps taken by the Government to increase the reading habit for children at the young age by providing library facility through the Department in the Government Primary and Secondary Schools;

c) the role of the library in self study of children is very important the stand of the Government regarding the same;

d) the steps taken by the Government to provide the library facility by the Department to the Government Higher Primary School of Huchangipura village of Jagalur taluk in Davangere district?

**PROBLEMS OF GUEST TEACHERS AND GUEST LECTURERS OF THE STATE**

**Sri K.Vivekananda (Teachers' Constituency)** -

53 (362) Will the Minister for Primary and Secondary Education be pleased to state:-

a) the number of employees who are working as guest teachers and guest lecturers in primary and secondary school and pre-university colleges of the State;

b) the details of the amount that is being provided by the Government for these guest teachers and guest lecturers;

c) the reasons for not providing the honorarium properly every month by the Government for guest teachers and guest lecturers who are working in the State; and the arrears which is yet to be provided for these employees? (Talukwise information be furnished)

**ATTACHING DISTRICT HOSPITAL TO MEDICAL COLLEGES**

**Smt. Balkhees Banu (Elected by Legislative Assembly) -**

54 (396) Will the Minister for Medical Education and Skill Development be pleased to state:-

a) the number of Government district hospitals in the State; whether it is true that the said hospitals have been attached to the Government medical colleges;

b) since it has been attached in this manner, the treatment is being given by the junior students who are studying medical courses for the patients who are coming to the said district hospitals, whether it has come to the notice of the Government that the treatment has not been availed in the proper manner for patients thereof;

c) if so, whether the step would be taken by the Government to give the direction to commence the hospitals by the respective colleges instead of attaching to the Government district hospitals?

**FOREST LAND IN TUMKUR DISTRICT**

**Sri Chidanand M.Gowda (Graduates' Constituency) -**

55 (411) Will the Minister for Forest, Ecology and Environment be pleased to state:-

a) the total extent of forest land in Tumkur district; out of which, the details of extent of talukwise and types of forests, social forestry, reserved forest, deemed forest be furnished;

b) whether the survey of the forest areas has been conducted in this district; if so, the year in which the same has been conducted; if not, the reasons thereof; the timelimit within which the survey of land would be conducted;

c) the extent of forest area that has been encroached in the district; the steps taken by the Government to evict the said encroachment; (the details of talukwise and villagewise encroachers be furnished)

d) whether the reforestation has been established in three types of forest of the district; if so, the expenditure that has been incurred for the reforestation during the last 10 years; the particulars of plant species that are being planted; (yearwise and forestwise details be furnished)

e) the date on which, the forest which is located in Mudigare Kaval of Sira Taluk is notified as reserve forest; the extent of the said forest area and the particulars of species of forest trees in the said forest;

f) the steps taken by the Forest Department for the protection of Chinkara(Hullekara) which are endangered in Bukkapatna Wildlife Sanctuary of Sira taluk;

g) whether it has come to the notice of the Government that trees-plants, herbs and the creepers that have medicinal properties are being destroyed by setting fire to the forest in summer season; if so, the steps taken by the Government to prevent the same?

**PROBLEMS FOR ELIGIBLE BENEFICIARIES DUE TO NON-ISSUENCE OF NEW BPL CARDS**

**Sri C.T.Ravi (Elected by Legislative Assembly) -**

56 (380) Will the Minister for Food and Civil Supplies and Consumer Affairs be pleased to state:-

a) the number of persons who have submitted application to get new BPL ration card in the State; (districtwise information be furnished)

b) the number of new BPL cards that have been distributed during the last 2 years; the number of applications which are pending for disposal; (districtwise information be furnished)

c) whether it has come to the notice of the Government that severe hardship is being faced by so many eligible beneficiaries who have submitted application due to non-issuance of new BPL cards;

d) if so, the date on which the BPL card would be issued for eligible beneficiaries who have submitted the application?

**DELAY FOR PROVIDING PROMOTION**

**Sri Shashil G.Namoshi (Teachers' Constituency) -**

57 (486) Will the Minister for Primary and Secondary Education be pleased to state:-

a) the reasons for not providing the promotion for secondary school teacher into the lecturer of pre-university college during the last 13 years; whether it has come to the notice of the Government that several teachers are being retired without promotion who have served long time service due to this delay and the injustice is being caused to them;

b) since the seniority list has not been prepared till date eventhough the assurance has been given by the Government in the House that the promotion process would be completed within the month of February 2025, suspection being araised on the officers, the timelimit within which the promotion would be provided to setright this problem?

## FACILITIES TO THE TREATMENT OF CHILDREN CANCER

**Dr. Umashree (Nominated) -**

58 (401) Will the Minister for Health and Family Welfare be pleased to state:-

a) the number of cases are being registered every year with regard to cancer in children of the State; the particulars of types of cancer which are being affected for children;

b) the manner in which the treatment facilities are being provided to this disease; whether the modern surgery facilities has been provided;

c) whether BMT is being provided to children who are undergoing bone marrow transplant; if so, the number of children for whom BMT is being provided in a month;

d) whether the programme is being conducted by the Government to create the awareness among the public with regard to the cancer found in children?

## RECRUITMENT OF PERMANENT SPECIALIST IN THE DEPARTMENT OF AYUSH

**Sri Shantharama Budna Siddi (Nominated) -**

59 (458 ) Will the Minister for Health and Family Welfare be pleased to state:-

a) whether it has come to the notice of the Government that the hardship is being faced for the non-availability of effective treatment for chronic diseases due to the posts of permanent specialist are lying vacant in the Department of Ayush; if so, the steps taken in this regard; (details be furnished)

b) whether it is true that the crores of rupees of grants by the Central and State Governments have not been utilized properly without the permanent specialists in

the Department of Ayush; if so, the steps taken to utilize the same; (details be furnished)

c) the grant that has been earmarked in the budget to recruit the permanent specialist for taluk and district level Hospitals of the Department of Ayush? (details be furnished)

**UNIVERSITIES IN THE STATE**

**Smt. Hemalatha Nayak (Elected by Legislative Assembly) -**

**Sri. S.L. Bhojegowda (Teachers' Constituency) -**

**Sri. S.V.Sankanur (Graduates' Constituency) -**

**Sri. Sharavana T.A. (Elected by Legislative Assembly) -**

**Sri D.S. Arun (Local Authorities Constituency) -**

60 (464+473+419+476+453 ) Will the Minister for Higher Education be pleased to state:-

a) the particulars of universities that have been established by the Government in the State; and the criteria under which the same have been established; the prevailing rules to establish the same; (details be furnished)

b) the total number of universities in the rural region of the State and out of which, the number of students, teaching and non-teaching staff and the employees are working; (ruralwise details be furnished)

c) the particular of schemes for which the annual grant is being provided by the Government for these universities at present and the purposes for which the same is being utilized;

d) whether there is a intention of the Government to close the total 9 universities that have been established by the then Government; whether Koppal University has been included there in; (details be furnished)

e) whether there is an example of closing of university permanently once commenced and functioning in the history of the State; whether it will cause the hardship for students due to closing of the same permanently; the persons who have responsible for the same; (details be furnished)

f) whether the proposal is before the Government to close the Government universities as per the recommendation of cabinet sub committee; and whether the step would be taken by the Government in view of improvement of the same without closing ;

g) whether the opinions have been received by the educationalist while taking the decision of cabinet sub committee to conduct study regarding newly commenced universities; (the detailed information in this regard be furnished)

h) the date on which Koppal University has been commenced; the nature of functions of the same; the number of colleges that have been affiliated to the said university; the number of graduates and post graduates students who have enrolled through the said colleges? (coursewise and collegewise details be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD - - Copies